RegaNo BG 155

— ೨೮ —

6—2—1962

Sri "SATYAVADI"
— DAILY —
MYSORE 4
46 th Year

ಸತ್ಯವಾದಿ
SATYAVADI

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow

ಸ್ಥಾಪಕರು— ಅಂಮನೆ ಸಿಂಸ್ಥೇದಾರ್ ಎಂ. ವಿ. ಸುಬ್ಬರಾಮುರು [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

ಸಮಾಜವಾದವೆಂದರೆ ಗುಲಾಮಗಿರಿ

ಸ್ವತಂತ್ರ ಪಕ್ಷದ ಸಂಸ್ಥಾಪಕರಾದ ಶ್ರೀ ರಾಜಾಜಿಯವರು ತೆನಾಲಿಯಲ್ಲಿ ಭಾಷಣ ಮಾಡುತ್ತಾ, ಕಾಂಗ್ರೆಸು ಬಕಾಸುರರ ದೊಡ್ಡ ಗುಂಪು, ಪ್ರತಿ ಪ್ರಜೆಯನ್ನೂ ಅದು ಗುಲಾಮಗಿರಿಯಲ್ಲಿಟ್ಟಿದೆ ಕಾಂಗ್ರೆಸು ಪ್ರಜಾಪೀಡಕ ಸಂಸ್ಥೆಯಾಗಿದೆ, ಕಾಂಗ್ರೆಸು ರಾಷ್ಟ್ರದ ಆರ್ಥಿಕತೆ ನಾಶ ಮಾಡುವ ಮಿಡತೆ ಆಗಿದೆ ಎಂದರು ವಿರೋಧಪಕ್ಷ ಬರುವುದನ್ನು ತಡೆಯಲು ಕಾಂಗ್ರೆಸು ಸುಳ್ಳು ಹೇಳುತ್ತಿದೆ. ಸ್ವತಂತ್ರ ಪಕ್ಷ ಶ್ರೀಮಂತರ ಪಕ್ಷ ಎಂದು ಹೇಳುವುದು ದೊಡ್ಡ ಸುಳ್ಳು ಎಂದವರು ನುಡಿದರು ಸಮಾಜವಾದ ಎಂದರೆ ಗುಲಾಮಗಿರಿ ಎಂದು ನುಡಿದರು.

ರಷ್ಯ ಚೀನಾ ಕಲಹ

ರಷ್ಯ ಮತ್ತು ಕಮ್ಯೂನಿಸ್ಟ ಚೀನಾ ಗಳಲ್ಲಿ ಉಂಟಾಗಿರುವ ಕಲಹವನ್ನು ಚರ್ಚಿಸಲು ರಷ್ಯದ ಮೂವರು ನಾಯಕರು ಒಂದು ತಿಂಗಳ ಕಮ್ಯೂನಿಸ್ಟ ನಾಯಕ ಮಾತ್ಸೆ ತುಂಗನನ್ನು ಭೇಟಿಮಾಡುವರೆಂದು ಪೂರ್ವ ಬರ್ಲಿನಿನ ಚೀನಿ ವೃತ್ತಗಳು ತಿಳಿಸಿವೆ ರಷ್ಯದ ಸಂಘಟನೆ ದೃಷ್ಟಿಯಿಂದ ರಷ್ಯ ವಿಂದ್ದ ಚೀನಕ್ಕೆ ಬೆಂಬಲಿಸಬೇಕೆಂದು ಮಾವೋ ಈಗಾಗಲೇ ಮನವಿ ಮಾಡಿ ರಷ್ಯ ಕಮ್ಯೂನಿಸ್ಟ ನಾಯಕರಿಗೆ ತಿಳಿಸಿರುವರು.

ಕೇಂದ್ರದೊಡನೆ ಕಲಹ

ಪಟ್ಟಣದ ಪ್ರದೇಶದಲ್ಲಿ ನಿರ್ಮಿಸುವ ಜನಸಂಖ್ಯೆ ಪ್ರದೇಶದ ಸಮರ್ಪಿನ ವಿಷಯದಲ್ಲಿ ಭಾವನಗರದ ಪೌರಸಭೆ ಹಾಗೂ ಕೇಂದ್ರ ಗೃಹ ಶಾಖೆಗೆ ಕಲಹ ಉಂಟಾಗಿದೆ ಈ ವಿಷಯದಲ್ಲಿ ಕೋರ್ಟಿಗೆ ಹೋಗುವುದಾಗಿ ಪೌರಸಭೆ ತಿಳಿಸಿದೆ.

೦೦

ವಿಮಾನದ ಬರದಿಂದ ಕಳೆದವಾರದಲ್ಲಿ 35 ಕ್ಕೂ ಹೆಚ್ಚು ವಿಮಾನಯಾನ ನಿರುದ್ಯೋಗಿಗಳಾಗಿರುವರು.

ಕಮ್ಯೂನಿಸ್ಟ್ ಸರ್ಕಾರ

ಭಾರತ ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ ನೀಲಂ ಸಂಜೀವರೆಡ್ಡಿಯವರು ಕೆರಿ ಸಹೋದರರು, ಆಂಧ್ರ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿಯವರಾದ ಶ್ರೀ ನಿಲಂ ರಾಜಶೇಖರ ರೆಡ್ಡಿಯವರು ಕಡಪದಲ್ಲಿ ಹೇಳಿಕೆಯಿತ್ತು, ಕಾಂಗ್ರೆಸು ಪಕ್ಷವನ್ನು ಸ್ವತಂತ್ರ ಪಕ್ಷ ದುರ್ಬಲಗೊಳಿಸುವುದರಿಂದ, ಕಮ್ಯೂನಿಸ್ಟ್ ಪಕ್ಷ ಗೆಲ್ಲುವ ಅಶಯವಿದೆ ಎಂದರು

ಲಿವರ್ ರೋಗ

ವಧೂ ಪೂರ್ವದಲ್ಲಿ ಹಾವಳಿ ಮಾಡಿದ ಲಿವರ್ ರೋಗ ಈಗ ನ್ಯೂಯಾರ್ಕಿನಲ್ಲಿ ಹಾವಳಿ ಮಾಡುತ್ತಿದೆ.

ಯುನಿಹಜರಿ

ವಿಶ್ವಶಾಂತಿಗಾಗಿ ಹಿಂದೂಗಳು ನಡೆಸಿದ ಪಾರ್ಥನೆಯಲ್ಲಿ ಬರ್ಮಾ ಪ್ರಧಾನಿಯೂ ಸಹ ಭಾಗವಹಿಸಿದ್ದರೆಂದು ರಂಗೂನಿನಿಂದ ವಾರ್ತೆ ಬಂದಿದೆ

ಅಸತ್ಯವೆಂದು ಗಗಾರಿನ್

ಅಮೆರಿಕ ಕುಕೂಟದಿಂದ ವಿನಾಶವಾದೀತೆಂಬ ಭವಿಷ್ಯವನ್ನು ರಷ್ಯದ ಗಗನ ಪ್ರವಾಸಿಯೂರಿ ಗಗಾರಿನ್ ಅಸತ್ಯವೆಂದಾಗಿ ಕೈರೋದಲ್ಲಿ ನುಡಿದರು.

ನದಿ ಉಬ್ಬರ

ಪಾಟ್ನಾದಲ್ಲಿ ಗಂಗಾನದಿ ಹಠಾತ್ತನೆ ಏರಿಕೆ ಆಗಿದೆ ಎಂದು ಕಲ್ಕತ್ತಾದಿಂದ ವರದಿಯಾಗಿದೆ

ಮಲಯದಲ್ಲಿ

ಅಮೆರಿಕ ಹೆಮೋಷ ನಿವಾರಣೆಗೆ ಮಲಯಾದ ಇಪ್ಪತ್ತು ಜನ ಹಿಂದೂಗಳು 3 ದಿನ ಪ್ರಾರ್ಥನೆ ಮಾಡಿದರು

ಟಿಬೆಟ್ಟಿನವರ ಆಗಮನ

ಪಿರಿಯಾಪಟ್ಟಣದ ನಿರಾಶ್ರಿತರ ಶಿಬಿರಕ್ಕೆ ಮತ್ತೆ 800 ಮಂದಿ ನಿರಾಶ್ರಿತರು ಬರುವರು.

ಚಿತ್ರದಲ್ಲಿ ಡ್ಯೂಕ್

ರಾಣಿ ಎಲಿಜಿಬತ್ ಪತಿ ಡ್ಯೂಕ್ ಆಫ್ ಎಡಿಬರೊ, ಕೆನ್ನೆತ್ ಮೂರ್ ರೊಡನೆ ಚಿತ್ರದಲ್ಲಿ ಭಾಗವಹಿಸುವರೆಂದು ಲಂಡನ್ ವಾರ್ತೆ.

ಕಾವ್ಯವಾಚನ

ಮೈಸೂರು ಡಿ ಸುಬ್ಬಯ್ಯಾ ರಸ್ತೆಯಲ್ಲಿರುವ ಮಹಾತ್ಮಾ ಗಾಂಧಿ ಸೇವಾ ಸಂಘದಲ್ಲಿ ಈ ಸಂಜೆ 6 ಪರೆ ಗಂಟೆಗೆ ಗವಕ ವಿದ್ವಾ ದಾ ಖ್ಯಾನ ಕಲ್ಪ ಕೆ. ವೆಂಕಟಸುಬ್ಬಯ್ಯ ಮತ್ತ ಗಮಳ ಕಲಾ ಪ್ರವೀಣೆ ಶ್ರೀಮತಿ ಗೌರಮ್ಮ ನಾಗರಾಜಂವರಿಂದ ಕಾವ್ಯವಾಚನ

೦೦

ಬೆಂಗಳೂರಿನಲ್ಲಿ ಕನ್ನಡ ಯುವಜನ ಸಭಾ ಸದಸ್ಯೀಳಸವನ್ನು ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನೆರವೇರಿಸಿತ್ತಾ, ಕನಡನನ್ನು ಆಡಳಿತ ಭಾಷೆ ಮಾಡಬೇಕಾದರೆ ಒಂದು ಜನಾಂಗವಾದರೂ ಆಗಬಹುದು, ಅಲ್ಲಿಯವರಿಗೆ ಸಮಾಧಾನ ಇರಬೇಕು ಎಂದರು.

★

ಬೊಂಬಾಯಿನ ಪೌರಸಭೆ ಉದ್ಯಾನದ ಮರು ನಾಮಕರಣ ಮಹೋತ್ಸವ ಸಂದರ್ಭದಲ್ಲಿ ಮುಖ್ಯ ಅತಿಥಿ ಭಾಷಣಕಾರನಿಸಿದ ಮಂತ್ರಿ ಶ್ರೀ ಮೊರಾರ್ಜಿ ದೇಸಾಯರು ವಿರುದ್ಧ ನಡೆದ ಪ್ರದರ್ಶನದಲ್ಲಿ ಕಮ್ಯೂನಿಸ್ಟ ನಾಯಕ ಶ್ರೀ ಎಸ್ ಎ ಡಾಂಗೆ ಸೇರಿ ಮುನ್ನೂರು ಮಂದಿ ಬಂಧಿತರಾದರು.

★

ಬೆಂಗಳೂರಿನಲ್ಲಿ ಸೇರಿದ್ದ ಕನ್ನಡ ಯುವಜನ ಸಭಾದ ಒಂದು ದಿನದ ಅಧಿವೇಶನ, ಗೋವಾ ವೈಸರಾಂಗೆ ಸೇರಬೇಕೆಂದು ಒತ್ತಾಯ ಮಾಡಿದೆ.

೦೦

ಪೌರಸಭೆಗಳು ಹಾಗೂ ಜಿಲ್ಲಾ ಬೋರ್ಡುಗಳ ನೌಕರರ ವೇತನವನ್ನು ರಾಜ್ಯ ಸರ್ಕಾರಿಗಳ ನೌಕರರ ಮಟ್ಟಕ್ಕೆ ತರಬೇಕೆಂದು ಭಾರತ ಸರ್ಕಾರ ಸೂಚಿಸಿದೆ.

ಪಂ|| ನೆಹರು

ಮಂಗಳೂರಿನಿಂದ ವಿಮಾನದಲ್ಲಿ ಮೈಸೂರಿಗೆ 8-20 ಕ್ಕೆ ಆಗಮನ 3-30 ಕ್ಕೆ ಭಾಷಣ ಅನಂತರ ಬೆಂಗಳೂರಿಗೆ ಪ್ರಯಾಣ. ಶ್ರೀರಂಗಪಟ್ಟಣ ಮತ್ತು ಮಂಡ್ಯದಲ್ಲಿ ಅವರಿಗೆ ಸ್ವಾಗತವಿದೆ ಮದ್ದೂರಿನಲ್ಲಿ ಅವರ ಭಾಷಣ ಇದೆ.

———

ಕಜಾಕ್ ಗಣತಂತ್ರದ ಚಿಮ್ಕೆಂಟ್ ವಿದ್ಯುದುಪಕರಣ ಸಂಯಂತ್ರವು ಯಾವ ಕಾರಣದಿಂದಲಾದರೂ ಮಾತನಾಡಲಾರದವರಿಗಾಗಿ ಹೊಸ ಸುಡಿಯಂತ್ರವೊಂದನ್ನು ತಯಾರಿಸಿದೆ ಇದಂ ಬಳಕೆಯಿಂದ ಮೊದಲಿನಂತೆಯೇ ಸ್ಪಷ್ಟವಾದ ಹಿರಿದನಿಯು ಮಾತು ಸಾಧ್ಯವಾಗುತ್ತದೆ ಈ ವರ್ಷ ಸಾವಿರದಾಯಿಕ ಉತ್ಪಾದನೆ ಪ್ರಾರಂಭವಾಗಲಿದೆ

ರಾಜಕೀಯ ಮತ್ತು ಧರ್ಮದ ಕಾಲ ಹೋಯಿತು, ಈಗ ವಿಜ್ಞಾನ ಹಾಗೂ ಅಧ್ಯಾತ್ಮದ ಕಾಲ ಬಂದಿದೆ ಎಂದು ಅಚಾರ್ಯ ವಿನೋಬಾ ಭಾವೆ ಹೇಳಿರುವುದನ್ನು ನಾನು ಒಪ್ಪುತ್ತೇನೆ ಎಂದು ಪ್ರಧಾನಿ ನೆಹರು ಹೈದರಾಬಾದಿನಲ್ಲಿ ತಿಳಿಸಿದರು

ನ್ಯೂಯಾರ್ಕಿನ ಗವರ್ನರರ ಪತ್ನಿ ಶ್ರೀಮತಿ ನೆಲ್ಸನ್ ರಾಕ್ಫೆಲರ್ ಗಂಡನಿಂದ ವಿವಾಹ ವಿಚ್ಛೇದನ ಪಡೆಯಲು ನೆವಾಡದ ರೀನೋವಿಗೆ ಆಗಮಿಸಿರುವರು ಅವರ ವಿವಾಹವಮಹೋತ್ಸವ 1 ವರ್ಷಗಳ ಹಿಂದೆ ನಡೆದಿತ್ತು

ವಿನಾಶಕಾರಿ ಹಾಗೂ ಪ್ರತಿಗಾಮಿ ಶಕ್ತಿಗಳ ವಿರುದ್ಧ ಸಂಘಟಿತ ಪ್ರಧಾನಿ ಶ್ರೀಮತಿ ಶ್ರೀಮಾವೋ ಎಚ್ಚರಿಸಿದ್ದಾರೆ

ಈ ಮಾಹೆ 20 ರ ವೇಳೆಗೆ ಅನೇಕ ರಾಷ್ಟ್ರಗಳಿಗೆ ಗಾಲ್ಬ್ರೈತ್ ಭಾರತಕ್ಕೆ ವಾಪಸಾಗುವರು

ಮಾರ್ಚ್ 15 ರಂದು ಮೈಸೂರು ಶಾಸನ ಸಭೆ ಸಮಾವೇಶವಾಗುವದೆಂದು ಬೆಂಗಳೂರು ವಾರ್ತೆ.

ಪಾಳೆಯ ಪಂಚಾಂಗ
ಅನ್ಯಾನ ಮಹಾವಿದ್ವಾ ದರ್ಶಾಧಿಕಾರಿ
ದೈವಜ್ಞಶಿಖಾಮಣಿ
ಪಂಪಶ್ಯಪ್ಪ ಜೋಯಿಸರಿಂದ
7 ಶತೀಯಾ ಪೂರ್ವಾಭಾದ್ಯ

ಮಾತಾರ್ ವಿಶೇಷಗಳು

ತಾವೆ (ಉ ಪ)— ಅಷ್ಟಗ್ರಹ ವಿಷಯದಲ್ಲಿನ ಭವಿಷ್ಯಗಳು ಸಳ್ಳೆಂದು ಅನೇಕ ಪಂಡಿತರು ತಮಗೆ ತಿಳಿಸಿಂ ವರೆಂದು ಪಂ|| ನೆಕ್ಕಾರು ಹೇಳಿದರು — ಅಷ್ಟ ಗ್ರಹ ಕೂಟವು ತಮಗೆ ಅರ್ಥವಾಗುವುದಿಲ್ಲವೆಂದೂ, ತಮ್ಮ ಕಾ ಗಳಲ್ಲಿ ತಾವು ಮುತವಾಯುವುದಾಗಿಯೂ, ತಮ್ಮ ಮೇಲೆ ಅದಂ ಪರಿಣಾಮ ಏನೂ ಇಲ್ಲ ವೆಂದೂ ಅವರು ಹೇಳಿದರು — ಸೂರ್ಯನನ್ನು ರಕ್ಷಿಸುವುದಕ್ಕಾಗಿ ಜನರು ಗಂಗಾ ಸ್ನಾನ ಮಾಡುವುದು ನಗಪಾಟಲೆಂದು ಹೇಳಿದಾಗ ಸಭಿಕರೆಲ್ಲರೂ ನಕ್ಕರು

ಕಾನಪುರ— ಏಂ ನೆಹರೂ ಇಲ್ಲಿ ಒಂದು ಬಹಿರಂಗಸಭೆಯಲ್ಲಿ ಮಾಡಿದ ಭಾಷಣದಲ್ಲಿ ಭಾರತವು ಶಾಂತಿಮಾರ್ಗದಿಂದ ಸಮೃತಾವಾದವನ್ನು ಜಗತ್ತಿಗೆ ತರುವುದೆಂದು ಹೇಳಿದರು ರಾಜಮಹಾರಾಜರುಗಳನ್ನು ವಜಾಮಾಡಿ ಅವರಿಗೆ ಪೆನ್ಷನ್ ಕೊಟ್ಟ ಕ್ರಮ ಸರಿಯಾಯಿತು ; ತಾಲ್ಲೂಕದಾರಿ ಮತ್ತು ಜಮೀನ್ದಾರಿ ಪದ್ಧತಿಗಳನ್ನು ಮುಕ್ತಾಯಗೊಳಿಸಲಾಯಿತೆಂದರು — ಜನಸಂಘ ಮತ್ತು ಸ್ವತಂತ್ರ ಪಕ್ಷ ಹಿಂದಿನ ದೃಷ್ಟಿಯವೆಂದೂ, ಎತ್ತಿನ ಗಾಡಿ ಮಾನಸವುಳ್ಳವುಗಳೆಂದೂ, ಭಾರತವು 2000 ವರ್ಷಗಳ ಹಿಂದಿದ್ದ ಬಿಲ್ಲು ಈಟಿಗಳ ಲೆಖ್ಖಾಚಾರದಲ್ಲಿ ಯೋಚಿಸುತ್ತಿರುವೆಂದೂ ಟೀಕಾ ಪ್ರಾಕಿಸ್ತಾನಗಳನ್ನು ಬಿಲ್ಲು ಈಟಿಗಳಿಂದ ಓಡಿಸುವುದಾಗಿ ತಿಳಿದಿರುವೆಂದೂ ಹೇಳಿದರು.

ಡಾಕಾ— ಡಾಕಾ ವಿಶ್ವವಿದ್ಯಾನಿಲಯದ ಹಾಲಿನಲ್ಲಿ ಪಾಕಿಸ್ತಾನ ವಿದೇಶಾಂಗ ಮಂತ್ರಿ ಮುನಪೂರ್ ಕ್ವಾದಿದ್ದರು ವಿದ್ಯಾರ್ಥಿಗಳನ್ನು ಪ್ರಶ್ನೋತ್ತರಕ್ಕಾಗಿ ಭೇಟಿ ಮಾಡಿದಾಗ ಬಹು ಗಲಾಟೆಯಾಗಿ ಕಡೆಗೆ ಮಂತ್ರಿಗಳು ಪೋಲೀಸರ ಸಹಾಯದಿಂದ ಕಾರಿಗೆ ಕರೆತಂದ್ಪಟ್ಟರು.

ಆಗ್ರಾ— ಆಗ್ರಾ ಸುತ್ತಮುತ್ತ ಕೆಲ ಪ್ರಾಧ್ಯಗಳು ಮತ್ತು ಪತ್ತಾಡುವ ಜ್ಯೋತಿಷ್ಯರು ಅಷ್ಟಗ್ರಹ ಕೂಟದ ಸೆಪದಿಂದ ಸ್ತ್ರೀಯಂನ್ನು ಹೆರಂಬಿ ಅವರಿಂದ ಹಣಕಾಸು ಆಭರಣಗಳನ್ನು ಪಡೆಯುತ್ತಿದ್ದುದನ್ನು ಕಂಡ ಕೆಲ ಯುವಕರು ಅವರನ್ನು ಹೊಡೆದು ಪದಾರ್ಥಗಳನ್ನು ವಾಪಸ್ಸು ಮಾಡಿಸಿದರೆಂದೂ ವಂದಿಯಾಗಿದೆ

ತಿಪಟೂರು— ಕಳೆದ ಡಿಸೆಂಬರು ತಿಂಗಳಲ್ಲಿ ಚಿಕ್ಕನಾಯಕನಹಳ್ಳಿಯಲ್ಲಿ ಚಿಕ್ಕಗಂಗಾ ಡ್ಯಾನ್ಸಿಂಗು ಹಾಲಿನಲ್ಲಾದ ಗಲಾಟೆ ಬಗ್ಗೆ ಅದಂ ವಾಲಿಕ ದೇವಯ್ಯನವರ ವೇಲೆ ಪೋಲಿಸರು ಹಾಕಿದ್ದ ಮೊಖದ್ದಮೆಯನ್ನು ವಜಾ ಮಾಡಿ, ಆಗ ಅಲ್ಲಿ ಧಾಳಿನಡೆಸಿದ ಪೋಲಿಸರ ವೇಲೆ ಮಾಜಿಸ್ಟ್ರೇಟರು ಮೊಖದ್ದಮೆ ರಿಜಿಸ್ಟರು ಮಾಡಿಕೊಂಡರು

ಲಿಬ್ಬ— ಗೋವಾ, ಡಿಯು, ಡಾವರ್ ಮೇಲೆ ಭಾರತದ ಸಾರ್ವಭೌತ್ವವನ್ನು ಒಪ್ಪುವುದಿಲ್ಲವೆಂಬ ಮಸೂದೆಯು ಪೋರ್ಚುಗಲ್ ರಾಷ್ಟ್ರೀಯ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದಿಸಲಾಯಿತು !

ವಿಶಾಖಪಟ್ಟಣ— ಭಾರತವು ಪಾಕಿಸ್ತಾನ ಮತ್ತು ಟೀಕಾದೊಡನೆ ವ್ಯಾಜ್ಯಗಳನ್ನು ಶಾಂತಿಯುತವಾಗಿ ಪರಿಹರಿಸಿಕೊಳ್ಳಲು ಪ್ರಯತ್ನಿಸುವುದೆಂದು ಪಂ || ನೆಹರು ತಿಳಿಸಿದರು.

ಮೈಸೂರುನಗರ (ದಕ್ಷಿಣ) ಕ್ಷೇತ್ರದಿಂದ ವಿಧಾನಸಭೆ ಚುನಾವಣೆ

— 25-2-62 —

ನಿಮ್ಮ ಪವಿತ್ರವಾದ ಓಟನ್ನು ಸ್ವತಂತ್ರ ಪಕ್ಷದ

ಡಾ|| ಎನ್. ಎಸ್. ನಾರಾಯಣರಾವ್

ಅವರಿಗೆ ಕೊಡಬೇಕಾಗಿ ವಿನಂತಿ — ಅವಂ ಸೀರಿಯಲ್ ನಂ 3

ಅವರ ಗುರುತು ನಕ್ಷತ್ರ

ನಕ್ಷತ್ರದ ಮುಂದೆ X ಹೀಗೆ ಸೀಲ್ ಹಾಕಿ

No. D. 397 / 61-62 **City Municipal Offices,**
Mysore, dated 29–1–1962

Tender Notification

Sealed Tenders in duplicate are invited from the P. W. D. Registered Contractors– Class III & above for the work mentioned below. The tenders will be received by the Municipal Commissioner, City Municipal Council, Mysore, upto 4 P. M, on the 12 th February 1962.

Name of work	Estimate Amount (work portion)	Earnest Deposit Amount at 2½ p.c	Period of completion of the work	Class of Contractor
1	2	3	4	5
	Rs.	Rs.		
Cement concreting of Old Mysore Bank Road running from Sayyaji Road upto Ghandhi Stoopa, Mysore	29330	733	Six Months	Class III and above

N. B.— Details of specifications, conditions and other particulars of the above work can be seen on all working days at the Office of the Municipal Executive Engineer, City Municipal Council, Mysore, during working hours.

★

(Sd) **B S. Nanjunda Gowda**
Municipal Commissioner, City Municipal Council, Mysore.

ವುಡ್‌ಲ್ಯಾಂಡ್ಸ್ ಜನಭರಿತ 2 ನೇ ವಾರ

ಪ ಮಾ (ಹಿಂದಿ) SHAMA

ಪಾತ್ರ–ಮುಂಬ್ಯ, ನಿವ್ಯ, ವಿಜೆ ದತ್ ; ಸಂಗೀತ : ಗುಲಾಂ ಮುಹಮದ್
ಅನೋಘ ಹಿಂದಿ ಕಲಾಕೃತಿ [ದಿನವಹಿ 3 ಪ್ರದರ್ಶನಗಳು]

ಅಪೆರಾ 2–2–62 ರಿಂದ

ಭೂ ಕೈ ಲಾ ಸ (ಕನ್ನಡ)

ಕಾರಣಗಣ— ರಾಜಕುಮಾರ್, ಜಮುನ, ಇ ವಿ ಸರೋಜ, ರಂಗಕಾರ್
ಕವಿಲಾಲಕೃಷ್ಣ, ಗೋಪಿ ಕೃಷ್ಣ, [ದಿನವಹಿ 3 ಆಟಗಳು]

Edited, Printed & Puhlished by the Proprietor, Dharma Prachara Nirata M. S. Krishna Rao, at the Satyavadi Press Chamarajapuram, Mysore 4.